# 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 13/2025

ದಿನಾಂಕ – 18.12.2025

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | – | ವೀರೇಶ | ಪ್ರಾ.ಸಾ. | – | 02 |
| ತಂದೆಯ ಹೆಸರು | – | ಕಾವಲು ಮಾರಪ್ಪ | ಚಾ.ಸಾ. | – | 03 |
| ವಯಸ್ಸು | – | 44 ವರ್ಷ | | | |
| ಉದ್ಯೋಗ | – | ಚಾಲಕ | | | |
| ವಾಸ ಸ್ಥಳ | – | ಚಳ್ಳಕೆರೆ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ನನಗೆ ಈ ಕೇಸಿನ ಚಾಸಾ–1, 2 ಮತ್ತು 4 ರಿಂದ 6 ಇವರು ಗೊತ್ತಿರುತ್ತಾರೆ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನಾನು ನೋಡಿದ್ದು, ಆತನು ನನಗೆ ಗೊತ್ತಿರುತ್ತಾನೆ.

ದಿಃ 13.11.2024 ರಂದು ರಾತ್ರಿ 7.00 ರಿಂದ 7.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ–1, 2 ಮತ್ತು 4 ಇವರು ಕೂಡಿಕೊಂಡು ಚಳ್ಳಕೆರೆ ಪಟ್ಟಣದ ಬಳ್ಳಾರಿ ರಸ್ತೆಯಲ್ಲಿರುವ ಇಂಜಿನಿಯರಿಂಗ್ ಕಾಲೇಜಿನ ಬಳಿಯ ಕರೇಕಲ್ಲು ಕೆರೆಕಟ್ಟೆಯ ಮೆಟ್ಟಿಲುಗಳ ಮೇಲೆ ಮಾತನಾಡುತ್ತಾ ಕುಳಿತಿದ್ದೆವು. ಆ ವೇಳೆಗೆ ಅಲ್ಲಿಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯು ಬಂದು ನಮ್ಮನ್ನು ಕುರಿತು ನೀವು ಯಾವ ಊರಿನವರೆಂದು ಕೇಳಿದ್ದು, ಆಗ ನಾವು ಇದೇ ಊರಿನವರೆಂದು ಆರೋಪಿಗೆ ಹೇಳಿದ್ದು, ಆಗ ಆರೋಪಿಯು ತನಗೆ ಕುಡಿಯಲು ರೂ. 500/– ಕೊಡಿರೆಂದು ಕೇಳಿದ್ದು, ಆಗ ನಾವು ನಮ್ಮ ಬಳಿ ದುಡ್ಡು ಇರುವುದಿಲ್ಲವೆಂದು ಹೇಳಿದ್ದು, ಆಗ ಆರೋಪಿಯು ನೀವು ಈ ದಿನ ನನಗೆ ದುಡ್ಡು ಕೊಡಲೇ ಬೇಕು, ಇಲ್ಲದೇ ಇದ್ದಲ್ಲಿ ನಿಮ್ಮನ್ನು ಸಾಯಿಸುತ್ತೇನೆ ಎಂದು ಹೇಳುತ್ತಾ ಆತನು ನಮ್ಮನ್ನು ಕುರಿತು ಸೂಳೇಮಕ್ಕಳಾ, ಬೋಳಿಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆಗ ಚಾಸಾ–2 ಎದ್ದು ನಮ್ಮ ಬಳಿ ಹಣವಿಲ್ಲವೆಂದು ಹೇಳಿ ಆರೋಪಿಯನ್ನು ಹೋಗು ಎಂದು ಹೇಳಿದ್ದು, ಆಗ ಆರೋಪಿಯು ಒಮ್ಮೆಗೆ ತನ್ನ ಬಳಿ ಇದ್ದ ಚಾಕುವಿನಿಂದ ಶ್ರೀನಿವಾಸನ ಕುತ್ತಿಗೆಯ ಎಡ ಮತ್ತು ಬಲ ಭಾಗಕ್ಕೆ ಹೊಡೆದು ರಕ್ತಗಾಯಗೊಳಿಸಿರುತ್ತಾನೆ. ಆಗ ಅದನ್ನು ನೋಡಿ ನಾನು ಗಲಾಟೆ ಬಿಡಿಸಲು

ಪ್ರಯತ್ನಿಸಿದ್ದು, ಆ ವೇಳೆಗೆ ಆರೋಪಿಯು ನನಗೂ ಕೂಡ ಅದೇ ಚಾಕುವಿನಿಂದ ಕುತ್ತಿಗೆಯ ಮುಂಭಾಗಕ್ಕೆ ಹೊಡೆದು ಗಾಯಗೊಳಿಸಿರುತ್ತಾನೆ. ಆಗ ಚಾಸಾ–1 ಮತ್ತು 4 ಕೂಡಿ ಜಗಳ ಬಿಡಿಸಲು ಬಂದಿದ್ದು, ಆಗ ಆರೋಪಿಯು ಅವರಿಬ್ಬರನ್ನು ನೂಕಿದ್ದು, ಅದರಿಂದ ಅವರಿಬ್ಬರೂ ಬಿದ್ದಿದ್ದು, ಅದರಿಂದ ಚಾಸಾ–4 ಇವರ ಬಲಮೊಣಕಾಲಿನ ಬಳಿ ಗಾಯವಾಗಿರುತ್ತದೆ.

ನಂತರ ಚಾಸಾ–1 ಇವರು ಗಾಯಗೊಂಡ ಚಾಸಾ–2 ಇವರನ್ನು ಚಿಕಿತ್ಸೆ ಕುರಿತು ಬೈಕಿನಲ್ಲಿ ಚಳ್ಳಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅದಾದ ನಂತರ ಅಲ್ಲಿಗೆ ಬಂದ ಒಂದು ಆಟೋದಲ್ಲಿ ಗಾಯಗೊಂಡ ನನ್ನನ್ನು ಮತ್ತು ಚಾಸಾ–4 ಇವರನ್ನು ಚಿಕಿತ್ಸೆ ಕುರಿತು ಚಳ್ಳಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆರೋಪಿಯು ಚಾಸಾ–2 ಮತ್ತು ನನಗೆ ಹಲ್ಲೆ ಮಾಡಲು ಉಪಯೋಗಿಸಿದ ಚಾಕು ನೋಡಿದಲ್ಲಿ ಗುರುತಿಸುತ್ತೇನೆ. ಈಗ ನೋಡುತ್ತಿರುವ ಎಂಒ–1 ಎಂದು ಗುರುತಿಸಿದ ಕಟರ್ ಅದುವೇ ಇರುತ್ತದೆ. ಸದರಿ ಘಟನೆಯ ಬಗ್ಗೆ ಪೋಲೀಸರು ನನ್ನನ್ನು ವಿಚಾರಿಸಿದ್ದು, ಆಗ ನಾನು ಪೋಲೀಸರ ಮುಂದೆ ಘಟನೆಯ ಬಗ್ಗೆ ಮೇಲೆ ಹೇಳಿದ ಎಲ್ಲಾ ವಿಷಯವನ್ನು ಹೇಳಿಕೆ ರೂಪದಲ್ಲಿ ಕೊಟ್ಟಿರುತ್ತೇನೆ. ಆ ದಿನ ನನಗೆ ಮತ್ತು ಚಾಸಾ–2 ಇವರಿಗೆ ಹಲ್ಲೆ ಮಾಡಿದ ಮತ್ತು ನಮ್ಮೊಂದಿಗೆ ಜಗಳ ತೆಗೆದು ವ್ಯಕ್ತಿಯು ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಇರುತ್ತಾನೆ.

**– ಪಾಟೀ ಸವಾಲು – ಆರೋಪಿಯ ಪರ – ಶ್ರೀಮತಿ ಕೆ.ಎಸ್.ಆರ್. ವಕೀಲರಿಂದ –**

ಆರೋಪಿ ಪರ ವಕೀಲರು ಬಿ.ಎನ್.ಎಸ್.ಎಸ್. ಕಲಂ 254(3) ಅಡಿಯಲ್ಲಿ ಅರ್ಜಿ ಸಲ್ಲಿಸಿ ಚಾಸಾ–1 ರಿಂದ 6 ಇವರು ಒಬ್ಬರಿಗೊಬ್ಬರು ಸಂಬಂಧಿಕರು ಮತ್ತು ಸ್ನೇಹಿತರಿದ್ದು, ಅದರಿಂದ ಅವರೆಲ್ಲರ ಪಾಟೀ ಸವಾಲನ್ನು ಒಮ್ಮೆ ಮಾಡುವುದಾಗಿ ಕೋರಿ ಅರ್ಜಿ ಸಲ್ಲಿಸಿ ಕಾಲಾವಕಾಶ ಕೋರಿದ್ದು, ಕಾರಣ ಕಾಲಾವಕಾಶ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.